KATK010047762023

**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು</u>**

**<u>ಸತ್ರ ಮೊಕದ್ದಮೆ.106/2023</u>**

ಪ್ರಾ.ಸಾ. ಃ **2**

ದೋ.ಸಾ. ಃ **1**

ದಿ.**29.01.2026**

| | |
|---|---|
| ಹೆಸರು | ಃ ಜಯಮ್ಮ |
| ಗಂಡನ ಹೆಸರು | ಃ ರಾಮಯ್ಯ |
| ವಯಸ್ಸು | ಃ **65** ವರ್ಷ |
| ಉದ್ಯೋಗ | ಃ ಕೂಲಿ ಕೆಲಸ |
| ವಾಸಸ್ಥಳ | ಃ ಕ್ಯಾತ್ಸಂದ್ರ, ತುಮಕೂರು |

ಸಾಕ್ಷಿಯನ್ನು ಕರೆಸಿ, ಸತ್ಯಪ್ರತಿಜ್ಞೆಯ ಪ್ರಮಾಣವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ</u>**

1. ನನಗೆ ಮೂರು ಮಂದಿ ಮಕ್ಕಳು. ಅವರ ಹೆಸರು ರಾಮಕ್ಕ, ಮುದ್ದರಾಮಯ್ಯ ಮತ್ತು ಮಾಲ. **15** ವರ್ಷಗಳ ಹಿಂದೆ ಮಾಲಳನ್ನು ಆರೋಪಿ ಕುಮಾರನಿಗೆ ಮದುವೆ ಮಾಡಿಕೊಟ್ಟಿದ್ದೆವು. ಅವರಿಗೆ ಇಬ್ಬರು ಹೆಣ್ಣುಮಕ್ಕಳು. ಅವರ ಹೆಸರು ಕಾವ್ಯ ಮತ್ತು ದಿವ್ಯ. ಮದುವೆಯಾದ ನಂತರ ನನ್ನ ಮಗಳು ಮಾಲ ಮತ್ತು ಆರೋಪಿ ಚೆನ್ನಾಗಿ ಸಂಸಾರ ಮಾಡಿಕೊಂಡಿದ್ದರು. ನನ್ನ ಮಗಳು ತೀರಿಕೊಂಡಿದ್ದಾಳೆ. ಆಕೆ ಆತ್ಮಹತ್ಯೆ ಮಾಡಿಕೊಂಡು ಮೃತಪಟ್ಟಳು. ಆಕೆಗೆ ಹೊಟ್ಟೆನೋವು ಬರುತ್ತಿತ್ತು. ಆಕೆ ನೇಣು ಹಾಕಿಕೊಂಡು ಮೃತಪಟ್ಟಳು. ನನ್ನ ಮಗಳ ಮನೆಯ ಅಕ್ಕಪಕ್ಕದವರು ಫೋನ್ ಮಾಡಿ ಈ ವಿಚಾರ ತಿಳಿಸಿದರು. ಈ ವಿಚಾರ ಗೊತ್ತಾಗಿ ಗುಬ್ಬಿಯಲ್ಲಿರುವ ಮಗಳ ಮನೆಗೆ ಹೋಗಿ ನೋಡಿದೆನು. ನಾನು ಹೋದಾಗ ಮನೆಯಲ್ಲಿ ನನ್ನ ಮಗಳನ್ನು ಮಲಗಿಸಿದ್ದರು, ಅವಳು ಮೃತಪಟ್ಟಿದ್ದಳು. ಆ ಸಮಯದಲ್ಲಿ ನನ್ನ ಮೊಮ್ಮಕ್ಕಳು ಚಾ ಸಾ **2** ಮತ್ತು **3** ಪಕ್ಕದಲ್ಲಿ ಕುಳಿತಿದ್ದರು. ನನ್ನ ಮೊಮ್ಮಕ್ಕಳು ನನ್ನ ಮಗಳು ಮೃತಪಟ್ಟ ಬಗ್ಗೆ ಏನೂ ವಿಚಾರ ತಿಳಿಸಲಿಲ್ಲ. ಆರೋಪಿ ಅಲ್ಲಿ ಇರಲಿಲ್ಲ. ಅನಂತರ ನನ್ನ ಮಗಳ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ

ತೆಗೆದುಕೊಂಡು ಹೋದರು. ನಾನು ಈ ವಿಚಾರವನ್ನು ಯಾರಿಗೂ ಹೇಳಿಲ್ಲ. ನಾನು ಹೆಬ್ಬೆಟ್ಟು ಗುರುತನ್ನು ಹಾಕಿದ್ದೇನೆ. ಅದರಲ್ಲಿ ಏನು ಬರೆದಿದ್ದಾರೆಂದು ಗೊತ್ತಿಲ್ಲ. ನಾನು ಕೊಟ್ಟಿದ್ದೇನೆಂದು ಹೇಳುವ ದೂರನ್ನು ನಿಶಾನೆ ಪಿ4 ಎಂದು ಗುರುತಿಸಲಾಯಿತು. ನನ್ನ ಮಗಳ ಮೃತದೇಹದ ಅಕ್ಕಪಕ್ಕದಲ್ಲಿ ಏನೂ ವಸ್ತುಗಳು ಇರಲಿಲ್ಲ. ಮರಣೋತ್ತರ ಪರೀಕ್ಷೆ ಆದ ನಂತರ ನನ್ನ ಮಗಳ ಮೃತದೇಹವನ್ನು ನಮಗೆ ಕೊಟ್ಟರು.

2. ನನ್ನ ಮಗಳು ದ್ವಿತೀಯ ಪಿಯುಸಿವರೆಗೆ ವಿದ್ಯಾಭ್ಯಾಸ ಮಾಡಿದ್ದಾಳೆ. ನನ್ನ ಮಗಳ ಹಸ್ತಾಕ್ಷರವನ್ನು ನೋಡಿದರೆ ಗುರುತಿಸುತ್ತೇನೆ. ಪೋಲೀಸರಿಗೆ ನಾನು ಯಾವುದೇ ವಸ್ತುಗಳನ್ನು ಕೊಟ್ಟಿಲ್ಲ. ಅವರು ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ. ಈಗ ನಾನು ನೋಡುತ್ತಿರುವ ಪಂಚನಾಮೆಯಲ್ಲಿ ನನ್ನ ಹೆಬ್ಬೆಟ್ಟಿನ ಗುರುತಿದೆ. ಆ ಪಂಚನಾಮೆಯನ್ನು ನಿಶಾನೆ ಪಿ5 ಎಂದು ಗುರುತಿಸಲಾಯಿತು. ಆರೋಪಿ ನನ್ನ ಅಳಿಯ. ನನ್ನ ಮೊಮ್ಮಕ್ಕಳು ನನ್ನ ಜೊತೆಗೆ ಮತ್ತು ಆರೋಪಿಯ ಜೊತೆಗೆ ಇದ್ದಾರೆ. ದೊಡ್ಡ ಮೊಮ್ಮಗಳಿಗೆ ಮದುವೆ ಮಾಡಿದ್ದೇವೆ.

(ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರ ಮುಂದೆ ನೀಡಿದ ದೂರಿಗೆ, ಮಹಜರ್ ಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ಸರಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ದೂರಿಗೆ ಮತ್ತು ಮಹಜರಿಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡುಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗೊಂಡು ಅನುಮತಿ ನೀಡಲಾಯಿತು).

**ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ :**

3. ಆರೋಪಿ ಪ್ರತಿದಿನ ಮದ್ಯಪಾನ ಮಾಡಿಕೊಂಡು ಬಂದು ನನ್ನ ಮಗಳ ಜೊತೆ ಗಲಾಟೆ ಮಾಡುತ್ತಿದ್ದನು ಎಂದರೆ ಸರಿಯಲ್ಲ. ಆತ ಸಂಸಾರಕ್ಕೆ ಯಾವುದೇ ಹಣ ಕೊಡದೆ, ಕೆಲಸವನ್ನು ಮಾಡದೆ ತಿರುಗಿಕೊಂಡಿದ್ದನು ಎಂದರೆ ಸರಿಯಲ್ಲ. ನನ್ನ

ಮಗಳು ಸುಮಾರು ಜನರ ಹತ್ತಿರ ಸಾಲ ಸಂಸಾರ ನಡೆಸಿಕೊಂಡು ಹೋಗುತ್ತಿದ್ದಳು ಎಂದರೆ ಸರಿಯಲ್ಲ. ಈ ಬಗ್ಗೆ ಆರೋಪಿಗೆ ಬುದ್ಧಿವಾದ ಹೇಳಿದ್ದೆವು ಎಂದರೆ ಸರಿಯಲ್ಲ. ದಿ.18.07.2022 ರಂದು ಬೆಳಿಗ್ಗೆ 6.30 ಗಂಟೆಗೆ ನನ್ನ ಮೊಮ್ಮಗಳು ದಿವ್ಯ ಫೋನ್ ಮಾಡಿ ಅಮ್ಮ ರಾತ್ರಿ ನೇಣು ಹಾಕಿಕೊಂಡು ಸತ್ತುಹೋಗಿದ್ದಾಳೆ ಎಂದು ತಿಳಿಸಿದಳು ಎಂದರೆ ಸರಿಯಲ್ಲ. ತಕ್ಷಣ ನಾವು ಗುಬ್ಬಿಗೆ ಬಂದು ನೋಡಿದಾಗ ನನ್ನ ಮಗಳ ಮೃತದೇಹ ಇತ್ತು, ಆರೋಪಿ ಹೊರಗಡೆ ಇದ್ದನು ಎಂದರೆ ಸರಿಯಲ್ಲ. ನನ್ನ ಮೊಮ್ಮಗಳನ್ನು ವಿಚಾರಿಸಿದಾಗ ಆರೋಪಿ ರಾತ್ರಿ ಕುಡಿದು ಬಂದು ಗಲಾಟೆ ಮಾಡಿದ್ದನು, ನನ್ನನ್ನು ಮತ್ತು ನನ್ನ ತಂಗಿ ಕಾವ್ಯಳನ್ನು ಎದುರು ಮನೆಯಲ್ಲಿ ಅಪ್ಪ ಮಲಗಿಸಿಕೊಂಡಿದ್ದರು, ಬೆಳಿಗ್ಗೆ ಎದ್ದು ನೋಡಲಾಗಿ ಅಮ್ಮ ತನ್ನ ಸೀರೆಯಲ್ಲಿ ಕುತ್ತಿಗೆಗೆ ಜೀರಿಕೊಂಡು ನೇಣುಹಾಕಿಕೊಂಡಿದ್ದಳು, ಆಕೆಯನ್ನು ಕೆಳಗೆ ಇಳಿಸಿ ನೋಡಿದಾಗ ಆಕೆ ತೀರಿಕೊಂಡಿದ್ದಳು ಎಂದು ಹೇಳಿದಳು ಎಂದರೆ ಸರಿಯಲ್ಲ. ಆಕೆಯ ತಲೆಯ ಹತ್ತಿರ ಒಂದು ಪುಸ್ತಕ ಇದ್ದು ಆ ಪುಸ್ತಕದಲ್ಲಿ ಗಂಡ ಬಿಡಲ್ಲ, ಬರೀ ಕೆಟ್ಟ ಮಾತು ಆಡಿ ಮನಸ್ಸು ತುಂಬ ನೊಂದಿದೆ, ಅದಕ್ಕೆ ಈ ತೀರ್ಮಾನ ತೆಗೆದುಕೊಂಡಿದ್ದೇನೆ ಎಂದು ಬರೆದಿದ್ದನ್ನು ನೋಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಕುಡಿದು ಬಂದು, ನನ್ನ ಮಗಳು ಸಾಯಲು ಪ್ರಚೋದನೆ ನೀಡಿದ್ದರಿಂದ ಆಕೆ ದಿ.17.07.2022 ರಂದು ರಾತ್ರಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರವನ್ನು ಪೋಲೀಸರ ಮುಂದೆ ಹೇಳಿ ನಿಶಾನೆ ಪಿ4 ರಂತೆ ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

4. ದಿ.26.07.2022 ರಂದು ಬೆಳಿಗ್ಗೆ 11-11.45 ಗಂಟೆಯವರೆಗೆ ಗುಬ್ಬಿ ಪೋಲೀಸ್ ಠಾಣೆಯಲ್ಲಿ ನನ್ನ ಮಗಳು ಮಾಲ ಬರೆದಿಟ್ಟಿದ್ದ ಪುಸ್ತಕವನ್ನು ಹಾಜರುಪಡಿಸಿದ ಮೇರೆಗೆ ಮತ್ತು ಮಾದರಿ ಬರವಣಿಗೆಯನ್ನು ಕೊಟ್ಟ ಮೇರೆಗೆ ಪೋಲೀಸರು ಮಂಜುನಾಥ ಮತ್ತು ರಂಗಪ್ಪನವರ ಸಮಕ್ಷಮ ನಿಶಾನೆ ಪಿ5 ರಂತೆ ಮಹಜರ್ ಮಾಡಿ, ನೋಟ್ ಪುಸ್ತಕವನ್ನು ಅಮಾನತ್ತುಪಡಿಸಿಕೊಂಡರು ಎಂದರೆ ಸರಿಯಲ್ಲ. ನಾನು ಈ ಪ್ರಕರಣವನ್ನು ರಾಜಿ ಮಾಡಿಕೊಂಡಿದ್ದೇನೆ. ರಾಜಿ ಮಾಡಿಕೊಂಡಿದ್ದರಿಂದ ಆರೋಪಿಯನ್ನು ಈ ಪ್ರಕರಣದಿಂದ ಬಚಾವು ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ್ದೇನೆಂದು ಹೇಳುವ ಮತ್ತು ಮಾಲ ಬರೆದಿಟ್ಟಿದ್ದಾಳೆಂದು ಹೇಳುವ ನೋಟ್ ಪುಸ್ತಕವನ್ನು ನಿಶಾನೆ ಪಿ6

ಮತ್ತು ಡೆತ್ ನೋಟನ್ನು ನಿಶಾನೆ ಪಿ7 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಶ್ರೀ.ಹೆಚ್.ಎನ್.ಗುರುನಂಜೇಗೌಡ, ವಕೀಲರಿಂದ ಆರೋಪಿತನ ಪರವಾಗಿ :**

ಇಲ್ಲ

(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಸಹಿ/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು